ಸಂಕಲನ 'ಕೆರೆಯ ನೀರನು ಕೆರೆಗೆ ಚೆಲ್ಲಿ'ಯಲ್ಲಿ ಭಾಷೆ, ತಂತ್ರ ವಿಧಾನಗಳಿಗೂ, ಕೊನೆಯಲ್ಲಿ ಬಂದ 'ಮಂಜು ಕವಿದ ಸಂಜೆ' ಸಂಕಲನಕ್ಕೂ ಸಾಕಷ್ಟು ವ್ಯತ್ಯಾಸಗಳಿವೆ. ಕಾದಂಬರಿಗಳ ಆಯಾಮಗಳಲ್ಲಿ ಬೇರೊಂದು ಅಭಿಪ್ರಾಯಗಳಿರಬಹುದು. ಆದರೆ, ಕಥೆಗಳಲ್ಲಿ ಅವರು ಪರಂಪರೆಯ ವಿಧಾನಗಳನ್ನು ತಂತ್ರದ ದೃಷ್ಟಿಯಿಂದಲೂ ಮುರಿದು ಕಟ್ಟಿದ್ದಾರೆ. ಅಂದರೆ 'ವಾಸ್ತವ', 'ನನ್ನ ಅಣ್ಣನ ನೆನಪು' ಮುಂತಾದ ಕಥೆಗಳಲ್ಲಿ ಅವರು ಅನುಸರಿಸುವ ತಂತ್ರವಿಧಾನ ಮಾಸ್ತಿಯವರದ್ದೇ. ಆದರೆ, ಅದಕ್ಕೆ ಬೇರೆ ಸ್ವರೂಪವನ್ನು ನೀಡುತ್ತಾರೆ. ಲಂಕೇಶ್ ತಮ್ಮ ಕಥನದಲ್ಲಿ 'ಹೇಳುವಿಕೆ' ಮತ್ತು 'ಬರೆ'ಯುವಿಕೆ ಎರಡನ್ನೂ ಹದವಾಗಿ ತಮ್ಮ ಕೊನೆಯ ಕಥೆಗಳಲ್ಲಿ ತಂದರು. ಈ ಬಗ್ಗೆ ಬೇರೆ ಅಭಿಪ್ರಾಯಗಳಿರಲೂ ಸಾಧ್ಯ. ಅವರ ಪ್ರಯೋಗಗಳು ಈ ನೆಲದ ಮನೋಧರ್ಮಕ್ಕೆ ಹಾಗು ಅವರ ಮನೋಸ್ಥಿತಿಗೆ ಒಗ್ಗುವ ರೀತಿಯಲ್ಲಿವೆ. ಆಗಲೇ ಪ್ರಸ್ತಾಪಿಸಿದ ಹಾಗೆ ಲಂಕೇಶರ ಕಥನವನ್ನು ಸಂಸ್ಕೃತಿಯ ವಿದ್ಯಮಾನಗಳ ಬೆಳಕಿನಲ್ಲಿ ಗ್ರಹಿಸಲು ಮುಂದಿನ ಬರಹಗಳು ಯತ್ನಿಸುತ್ತವೆ. 'ವಿದ್ಯಮಾನ' ಎಂದಾಗ ಸಾಹಿತ್ಯದಂತಹ ಪ್ರಕಾರದಲ್ಲಿ ಯಾವ ಬಗೆಯಲ್ಲಿ ಸಮಕಾಲೀನವಾಗಬಹುದು ಎಂಬುದು ಕೂಡ ಮಹತ್ವದ ಪ್ರಶ್ನೆ. ಲಂಕೇಶ್ ತಮ್ಮ ಕಥೆ–ಕಾದಂಬರಿಗಳಲ್ಲಿ ಹಳ್ಳಿ, ಪಟ್ಟಣ, ನಗರಗಳ ಭಿತ್ತಿಯಲ್ಲಿ ಸಮಕಾಲೀನ ವಿದ್ಯಮಾನಗಳನ್ನು ಗ್ರಹಿಸುತ್ತಾರೆ. ನಗರ ಮತ್ತು ಗ್ರಾಮಚಿತ್ರಗಳನ್ನು ನವೋದಯ ಮತ್ತು ಪ್ರಗತಿಶೀಲರಿಗಿಂತ ಭಿನ್ನವಾಗಿಯೇ ಕಂಡರು. ಗ್ರಾಮಗಳನ್ನು ಕೇವಲ ಸಹಾನುಭೂತಿ, ಆದರ್ಶಮಯತೆ, ನಿಸರ್ಗದ ಒಡಲಿನಲ್ಲಿ ತೇಲಿಹೋಗುವ ಮನುಷ್ಯ ಗುಣ ಇವುಗಳಿಂದ ಹೊರತಾದ ಅಂಶಗಳು ಅವರ ಕಥೆಗಳಲ್ಲಿ ಬಂದವು. ಈ ದಾರಿಗಳಲ್ಲೇ ಸಾಧ್ಯವಿದ್ದಷ್ಟು ಅವರ ಕಥನವನ್ನು 'ಇಂದಿನ'ತನಗಳಿಗೆ ಒಗ್ಗಿಸಿಕೊಳ್ಳಲು ನೋಡಲಾಗಿದೆ. ಯಾವುದೇ ಗಟ್ಟಿ ಬರಹಗಾರ ಕೇವಲ ತಾನು ಸೃಷ್ಟಿಸಿದ ಪಾತ್ರಗಳಿಂದ ಸದಾ ನೆನಪಿನಲ್ಲಿ ಉಳಿಯುವುದು ಒಂದು ಬಗೆ. ಮತ್ತೊಂದು; ಪಾತ್ರಗಳನ್ನು ಸಂಕೀರ್ಣಗೊಳಿಸಿ, ಅವು ಸಾಂಸ್ಕೃತಿಕವಾಗಿ ಹೇಗೆ ಮುಖ್ಯವೆಂಬುದು ಕೂಡ ಅಷ್ಟೇ ಪ್ರಧಾನ ಸಂಗತಿ. ಲಂಕೇಶರು ಒಳಗೊಂಡಂತೆ ಕನ್ನಡದ ಅನೇಕ ಬರಹಗಾರರು ಈ ದಾರಿಯಲ್ಲಿ ಬರುತ್ತಾರೆ. ಲಂಕೇಶ್ ಸಾಧ್ಯವಿದ್ದಷ್ಟೂ ಮನುಷ್ಯ ಗ್ರಹಿಸುವ ಬಹುತೇಕ ಸಂಗತಿಗಳನ್ನು ಒಳಗುಮಾಡಿಕೊಂಡಿದ್ದಾರೆ. ನನಗೆ ತಿಳಿದ ಮಟ್ಟಿಗೆ, ಯಾವ ಮನುಷ್ಯ ಭಾವನೆಗಳನ್ನು ಕೇವಲ ಸೋಗಲಾಡಿತನಗಳಿಗೆ, ಢೋಂಗೀತನಗಳಿಗೆ ಒಗ್ಗಿಸಿಕೊಳ್ಳುವನೋ, ಆತ ನಿಜಕ್ಕೂ ಅಪ್ರಾಮಾಣಿಕನಾಗಿರುತ್ತಾನೆ. ಯಾವ ಮನುಷ್ಯ ತನ್ನ ಒಳಗನ್ನು ಸದಾ ಎಚ್ಚರದಿಂದ ಇಟ್ಟುಕೊಂಡು, ಸಮಾಜದ ಸಂಕೀರ್ಣತೆಗಳನ್ನು ಅರ್ಥಮಾಡಿಕೊಳ್ಳುತ್ತಾನೋ ಆತ ಪ್ರಾಮಾಣಿಕನಾಗಲು ಯತ್ನಿಸುತ್ತಲೇ ಇರುತ್ತಾನೆ. ಇಂಥವನು ಬದುಕನ್ನು ಸೂಕ್ಷ್ಮವಾಗಿ ಗ್ರಹಿಸುವ ಹಂತದಲ್ಲಿರುತ್ತಾನೆ. ಲಂಕೇಶರ ಕಥನದಲ್ಲಿ ಈ ಎರಡೂ ಬಗೆಯ ವ್ಯಕ್ತಿಗಳನ್ನು ಕಾಣಲು ಸಾಧ್ಯ. ಮನುಷ್ಯನ ಸಂಕೀರ್ಣತೆ ಮತ್ತು ಕಥನಕಲೆಯ ಕುರಿತು ಅಚಿಬೆ ಹೀಗೆ ಹೇಳುತ್ತಾನೆ: 'ಈ ಪರಿಕರವನ್ನು ಮನುಷ್ಯನ ಕಲ್ಪನಾವಿಲಾಸವೆಂದು ಕರೆಯುವೆ. ಮಾನವ ಪರಿಕರಗಳನ್ನು ನಿರ್ಮಿಸುವ, ಆ ಪರಿಕರಗಳ ಮೂಲಕ ತನ್ನ ಲೋಕವನ್ನು ಪುನಾರೂಪಿಸಿಕೊಳ್ಳುವ ಪ್ರಾಣಿ. ಆತ ಕಥನ ಕಟ್ಟೋಣದ ಪ್ರಾಣಿ. ತನ್ನ ಕಥನಗಳ ಮೂಲಕ ಕಲ್ಪನಾಶಕ್ತಿಯಲ್ಲಿರುವ ಪರಿಸರವನ್ನು ಮತ್ತೆ ಕಟ್ಟುವವನು. ಮಾನವನನ್ನು ಎಷ್ಟೇ ವಿಶ್ಲೇಷಣೆ ಮಾಡಲು ಪ್ರಯತ್ನಿಸಿದರೂ ಅದು ವಿಫಲವೇ ಆಗಲು ಕಾರಣ ಆತನ ಸಂಕೀರ್ಣತೆ'. ಈ ಬಗೆಯ ಸಂಕೀರ್ಣತೆಗಳು ಏಕ ಬಗೆಯವು ಎಂದು ಕರೆಯುವುದಕ್ಕೆ ಆಗುವುದಿಲ್ಲ. ಹಾಗಾಗಿಯೇ ತನ್ನ ಕಲ್ಪನೆಗಳ ರೂಪಾಂತರಕ್ಕೆ ತಕ್ಕ ಹಾಗೆ ಬರಹಗಾರನು ಪ್ರಯೋಗಗಳನ್ನು ನಡೆಸಬೇಕಾಗುತ್ತದೆ. ಅಚಿಬೆ ಹೇಳುವ ಹಾಗೆ, ಮನುಷ್ಯನ ಸಂಕೀರ್ಣತೆಗಳನ್ನು ಅರ್ಥಮಾಡಿಕೊಳ್ಳುವುದರ ಮೇಲೆ ನಮ್ಮ ಯಶಸ್ಸು ಅಡಗಿರುತ್ತದೆ. ಕಾಲದ ದೃಷ್ಟಿಯಿಂದ ಅಚಿಬೆಯ ಸಮಕಾಲೀನರಾದ ಲಂಕೇಶ್ ಈ ಬಗೆಯ ಸಂಕೀರ್ಣತೆಗಳನ್ನು ತಮ್ಮ ಕಥನದಲ್ಲಿ ಸದಾ ಶೋಧಿಸಲು ಯತ್ನಿಸುತ್ತಾರೆ. ಅವರ ಕಥನದ ಪರಿಸರ, ಭಾಷಿಕ ಪರಿಕರಗಳು ಬದಲಾಗುತ್ತಲೇ ಬಂದವು. ●